ಇತ್ತೀಚೆಗೆ ಹೋಗಿಬಿಟ್ಟಳು. ಆ ಮದುವೆಗೆ ಹೆಚ್ಚು ಒತ್ತಾಯ ಅವಳೇ ಮಾಡಿದ್ದು; ಆ ಚಿಂತೆ ಅವಳನ್ನು ಸಾಯುವತನಕ ಕೊರಗಿಸಿತ್ತು. ಈಗ ನಾನು, ಸುಮತಿ ಇಬ್ಬರೇ ಮನೆಯಲ್ಲಿ. ನಾನು ಎಷ್ಟು ದಿನ ಅಂತ ಇರ್ತಿನಿ ಹೇಳಿ? ಅವಳ ಬದುಕು ಹಿಸಿದ ಸೀರೆಯಂತಾಯ್ತಲ್ಲ ಎಂಬ ಕೊರಗು ನನ್ನನ್ನು ಬಾಧಿಸುತ್ತಲೇ ಇದೆ. ನಿಮ್ಮ ಅರ್ಜಿ ನೋಡಿದೆ. ನೀವು ರೆಡ್ಡೀಸ್ ಎಂದು ಗೊತ್ತಾಯ್ತು. ನಮ್ಮವರು ಎಂಬ ಭಾವದಲ್ಲಿ ಇಷ್ಟು ತೋಡಿಕೊಂಡೆ. ಅನ್ಯಥಾ ಭಾವಿಸಬೇಡಿ.'

## ನಾಲ್ಕು

ನೋಡುವುದಕ್ಕೆ ಸುಮತಿ ತೀರಾ ಕೆಟ್ಟದಾಗೇನೂ ಇರಲಿಲ್ಲ. ಶಿವಶಂಕರನಿಗೂ 'ಜ್ಞಾನಯಜ್ಞ'ದಲ್ಲಿ ಕೆಲಸ ಆಯಿತು. ಇದಾದ ಸ್ವಲ್ಪ ಸಮಯದಲ್ಲಿಯೇ ಶಿವಶಂಕರ–ಸುಮತಿಯರು ಸರಳವಾಗಿ ಹಾರ ಬದಲಾಯಿಸಿಕೊಂಡರು. ಪದ್ದಣ್ಣ ನಾಲ್ಕು ಜನ ಇಷ್ಟಮಿತ್ರರನ್ನು ಕರೆದು ಊಟ ಹಾಕಿಸಿದರು. ಅವರು ಸಂಭ್ರಮಪಡುವುದಕ್ಕಿಂತ ಏನೋ ಭಾರ ಇಳಿಸಿದ ನೆಮ್ಮದಿ ಪಡೆದವರಂತೆ ಕಾಣುತ್ತಿದ್ದರು. ಈ ಬಿಸಿ ಆರುವ ಮುನ್ನವೆ ಅವರು ಹೆಂಡತಿಯನ್ನು ಅನುಸರಿಸಿ ನಡೆದರು.

ಶಿವಶಂಕರ–ಸುಮತಿ ದಂಪತಿ ಮೆಲ್ಲನೆ ದೈನಂದಿನ ಜೀವನಕ್ಕೆ ಹೊರಳಿದರು. ಶಿವಶಂಕರ ಬೆಳಿಗ್ಗೆ ತಿಂಡಿ ತಿಂದು ಬುತ್ತಿ ಕಟ್ಟಿಕೊಂಡು ಕಾಲೇಜಿಗೆ ಹೋಗುವುದು. ಸಂಜೆ ಕಾಲೇಜು ಮುಗಿಸಿ ಕಾಫಿ ಬಾರಿನಲ್ಲಿ ಗೆಳೆಯರೊಂದಿಗೆ ಹರಟೆ ಮನೆಗೆ ಏಳರ ಹೊತ್ತಿಗೆ ಹಿಂತಿರುಗುವುದು. ಈಗ ಮನೆಯಲ್ಲಿ ಇವರಿಬ್ಬರೇ. ಇಬ್ಬರ ನಡುವೆ ಅನ್ಯೋನ್ಯತೆ ಬೇಗನೆ ಬೆಳೆಯಿತು. ಇವನೂ ಆಗಾಗ ಅವಳಿಗೆ ಹೂ–ಹಣ್ಣು, ಜಿಲೇಬಿಯಂತಹ ಸಿಹಿ ತಿಂಡಿಗಳನ್ನು ತಂದು ತಿನ್ನಿಸುತ್ತಿದ್ದ. ಇದು ಅವಳಲ್ಲಿ ಹಿಂದೆಂದೂ ಕಾಣದ ಸುಖದ ನೆಲೆಯನ್ನು ಸ್ಥಿರಗೊಳಿಸುತ್ತಿತ್ತು. ಅವರ ಪ್ರೇಮ ವಿಸ್ತರಣೆ ಪಡೆಯುವ ಲಕ್ಷಣ ಕಾಣಿಸಿದಾಗ ಇಬ್ಬರಿಗೂ ಅವರ್ಣನೀಯ ಆನಂದವಾಯಿತು. ಬಹುಜತನದಿಂದ ಅವನು ಅವಳನ್ನು ನೋಡಿಕೊಂಡ. ಅವಳ ಕೊನೆಯ ತಂಗಿ ಬಂದು ಇವಳನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಹೆರಿಗೆ ಮಾಡಿಸಿ ಬಾಣಂತನ ಮಾಡಿದಳು.

ತಾಯಿಯನ್ನು ಹೆಚ್ಚು ಹೋಲುತ್ತಿದ್ದ ಗಂಡು ಮಗುವಿಗೆ ವಿಷ್ಣುಕಾಂತ ಎಂದು ಹೆಸರಿಟ್ಟರು. ಶಿವಶಂಕರ ನಾದಿನಿಯ ಕುಟುಂಬಕ್ಕೆ ಋಣಿ ಎಂದ. ಅವರು ಇದು ತಮ್ಮ ಜವಾಬ್ದಾರಿ ಎಂದು ಪ್ರತಿನುಡಿದು ಅವನ ಹೃದಯ ಭಾರವನ್ನು ಹಗುರಗೊಳಿಸಿದರು.

ಸುಮತಿಯ ಕೊನೆಯ ತಂಗಿಯ ಮಗಳು ಸುಮ ಎಂಟು ವರ್ಷದ ಬಾಲೆ. ಮೂರನೆಯ ಇಯತ್ತೆಯಲ್ಲಿದ್ದಾಳೆ. ರಜೆ ಕಾಲವಾದ್ದರಿಂದ ನಾವು ಇಲ್ಲಿಯೇ ಅವಳನ್ನು ಇರಿಸಿಕ್ಕೊಣ ಎಂದ ಹೆಂಡತಿಯ ಮಾತಿಗೆ ಶಿವಶಂಕರ ಅಸ್ತು ಎಂದ. ಸುಮ ಇನ್ನು ಮುಂದೆ ನನ್ನ ಹಿರಿಮಗಳಂತೆ ಎಂದೂ ಸೇರಿಸಿದ.

ಸುಮ ಪಾದರಸದಂತಹ ಹುಡುಗಿ. ಮಾತಂತೂ ಕಾಳು ಸಿಡಿದ ಹಾಗೆ. ನಿಜಕ್ಕೂ ಸುಮತಿಗೆ ಸುಮಳ ಹರಕತ್ತಿತ್ತು. ವಿಷ್ಣುಕಾಂತನ ನಾನಾ ಚೇಷ್ಟೆಗಳಿಗೆ ತಡೆಗೋಡೆಯಾಗಿ ಸುಮ ಕೂಡ ಒದಗುತ್ತಿದ್ದಳು. ಶಿವಶಂಕರನಿಗೂ ಇದು ಸೇರುತ್ತಿತ್ತು. ಅವಳಿಗೆ ಚಾಕೋಲೇಟುಗಳನ್ನು ತಂದುಕೊಟ್ಟು ಮುದ್ದಿಸುತ್ತಿದ್ದ. ಮರೆತ ದಿನ ಅವಳು ಮುಖ ಸೊಟ್ಟಗೆ ಮಾಡಿಕೊಂಡು ಮಾತೇ ಆಡುತ್ತಿರಲಿಲ್ಲ. ನೆಟ್ಟಗೆ ಮಾಡುವ ವಿದ್ಯೆ ಶಿವಶಂಕರನಿಗೆ ಗೊತ್ತಿತ್ತು. ಅದು ಮಾರನೆಯ ದಿನವೇ ಪ್ರಯೋಗವಾಗುತ್ತಿತ್ತು. ಫಲ ನಿಶ್ಚಿತವಾಗಿ ದೊರೆಯುತ್ತಿತ್ತು.